ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**ಸಂಕೇತ ಸಂಖ್ಯೆ : 62-K**
**Code No. : 62-K**

**C**

**CCE PF**
**CCE PR**
**REVISED**

**Question Paper Serial No. 80**

ಇಲ್ಲಿಂದ ಕತ್ತರಿಸಿ

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

ದಿನಾಂಕ : 03. 04. 2020 ] [ Date : 03. 04. 2020

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ] [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 100 ] [ Max. Marks : 100

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

## *ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**Tear here**



https://www.karnatakaboard.com/

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ವ್ಯಂಜನಗಳಿಗೆ ಸ್ವರ ಸೇರಿದಾಗ ಆಗುವ ಅಕ್ಷರ

   (ಎ) ವ್ಯಂಜನಾಕ್ಷರ (ಬಿ) ಸಂಯುಕ್ತಾಕ್ಷರ

   (ಸಿ) ಗುಣಿತಾಕ್ಷರ (ಡಿ) ಒತ್ತಕ್ಷರ

2. ಕೇಳುಗರಿಗೆ ಅಥವಾ ಓದುಗರಿಗೆ ಆಕರ್ಷಣೀಯವಾಗಿ ಮಾಡಲು ಭಾಷೆಯಲ್ಲಿ ಬಳಸುವ ಚಮತ್ಕಾರದ ಮಾತು

   (ಎ) ಅಲಂಕಾರ (ಬಿ) ಛಂದಸ್ಸು

   (ಸಿ) ವ್ಯಾಕರಣ (ಡಿ) ವಿಭಕ್ತಿಗಳು

3. ಹುಡುಗ, ಹಸು, ಮಕ್ಕಳು, ಹುಡುಗಿ – ಇವುಗಳಲ್ಲಿ ಗುಂಪಿಗೆ ಸೇರದ ಪದ

   (ಎ) ಹುಡುಗ (ಬಿ) ಹಸು

   (ಸಿ) ಮಕ್ಕಳು (ಡಿ) ಹುಡುಗಿ

4. 'ಸುರೇಂದ್ರ' – ಇದು ಈ ಸಂಧಿಗೆ ಉದಾಹರಣೆ

   (ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ

   (ಸಿ) ವೃದ್ಧಿ ಸಂಧಿ (ಡಿ) ಯಣ್ ಸಂಧಿ

5. ಪದಗಳಿಗೆ ಹೆಚ್ಚುವರಿ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಸಲಾಗುವ ಲೇಖನ ಚಿಹ್ನೆ

   (ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ

   (ಸಿ) ಭಾವಸೂಚಕ ಚಿಹ್ನೆ (ಡಿ) ಆವರಣ ಚಿಹ್ನೆ

6. 'ಕವಿ' – ಶಬ್ದದ ತದ್ಭವ ರೂಪ

   (ಎ) ಕಬ್ಬಿಗ (ಬಿ) ಕಬ್ಬ

   (ಸಿ) ಕಾವ (ಡಿ) ಕಗ್ಗ

7. ಇವುಗಳಲ್ಲಿ ಪೋರ್ಚುಗೀಸ್ ಭಾಷೆಯಿಂದ ಬಂದು ಕನ್ನಡದಲ್ಲಿ ಬಳಕೆಯಾಗುವ ಶಬ್ದ

   (ಎ) ಭೂಮಿ (ಬಿ) ಮೈಲು

   (ಸಿ) ರಸ್ತೆ (ಡಿ) ಮೇಜು



https://www.karnatakaboard.com/

8. 'ಕೈಯನ್ನು + ಮುಗಿ = ಕೈಮುಗಿ' – ಇದು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ಕ್ರಿಯಾ ಸಮಾಸ (ಬಿ) ಅಂಶಿ ಸಮಾಸ

(ಸಿ) ದ್ವಂದ್ವ ಸಮಾಸ (ಡಿ) ಗಮಕ ಸಮಾಸ

9. 'ದ್ಯೋತಕ' – ಈ ಪದದ ಅರ್ಥ

(ಎ) ಜ್ಯೋತಿ (ಬಿ) ಗುರುತು

(ಸಿ) ಧ್ವಜ (ಡಿ) ದಾಸ್ಯ

10. ಶರೀಫರ ಹಾಡುಗಳನ್ನು ಬರೆದುಕೊಳ್ಳುತ್ತಿದ್ದ ವ್ಯಕ್ತಿ

(ಎ) ಹಜರತ್ ಇಮಾಮ್ (ಬಿ) ಕುಂಬಾರ ಮುದುಕಪ್ಪ

(ಸಿ) ಖಾದರ್ ಷಾ ವಲಿ (ಡಿ) ಬಸಮ್ಮ

II. **ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** 5 × 1 = 5

11. ಕುಲಕರ್ಣಿಯ ಕೈಯಲ್ಲಿ : ಪಿಸ್ತೂಲು :: ರಾಮ್‌ಸಿಂಗನ ಕೈಯಲ್ಲಿ : .......................... .

12. ಕೆಳದಿ ಸಂಸ್ಥಾನ : ಚೆನ್ನಮ್ಮ :: ಬೆಳವಡಿ ಸಂಸ್ಥಾನ : .......................... .

13. ಮರ್ತ್ಯಲೋಕ : ಮಿಥ್ಯವ ನುಡಿವುದು :: ದೇವಲೋಕ : .......................... .

14. ಜಪಮಣಿಯು : ಕರದಲ್ಲಿ :: ಮಂತ್ರವು : .......................... .

15. ಹೋಗುತ್ತಾನೆ : ವರ್ತಮಾನ ಕಾಲ :: ಹೋಗುವನು : .......................... .

III. **ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 5 × 1 = 5

16. ಮಿನಿಪೊಲೀಸ್ ನಗರಕ್ಕೆ ಹೋದಾಗ ಗೊರೂರರ ಜೇಬಿನಲ್ಲಿ ಏನಿತ್ತು ?

17. ಯಾವ ಮಳೆ ಸುರಿದರೆ ಕೆರೆಗಳು ತುಂಬುತ್ತವೆ ?

18. 'ಹೀಗೊಂದು ಟಾಪ್ ಪ್ರಯಾಣ' – ಈ ಲೇಖನವು ಯಾವ ಸಾಹಿತ್ಯ ಪ್ರಕಾರಕ್ಕೆ ಸೇರಿದೆ ?

19. ಕೋನಾರ್ಕ್ ದೇವಾಲಯದ ಮಹಾದ್ವಾರಕ್ಕೆ ಕಲಶವನ್ನು ಕೂಡಿಸಿದವನು ಯಾರು ?

20. ಮೋಹನಪುರದ ಚಳುವಳಿಯನ್ನು ಮುನ್ನಡೆಸಿದ ಉತ್ಸಾಹೀ ತರುಣನ ಹೆಸರೇನು ?



https://www.karnatakaboard.com/

IV. **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $10 \times 2 = 20$

21. ಹೆಂಡತಿ ಹಾಗೂ ಮಗಳನ್ನು ಕಳೆದುಕೊಂಡ ಶರೀಫರು ತಮ್ಮ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆ ಹೇಗೆ ?

22. ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ವಿಚಾರಗಳು ಯಾವುವು ?

23. ಹಿಂದೂ ಪರಂಪರೆಯೊಂದಿಗೆ ಶರೀಫರ ಬಾಲ್ಯವು ಹೇಗೆ ಬೆರೆತಿತ್ತು ?

24. 'ವಿಶ್ವಾಮಿತ್ರ ಸೃಷ್ಟಿ'ಯು ಬೀಚಿಯವರ ಮೇಲೆ ಯಾವ ರೀತಿ ಪ್ರಭಾವ ಬೀರಿತು ?

25. ಆಂಗ್ಲರು, ಆಫ್ರಿಕನ್ನರು ಮತ್ತು ಅಕ್ಕಿ, ರಾಗಿ – ಇವುಗಳನ್ನು ನಿಸಾರ್ ಅಹಮದ್‌ರು ಏಕೆ ನಿದರ್ಶನವಾಗಿ ಬಳಸಿದ್ದಾರೆ ?

26. 'ಹಿರಿಬಾಳುಗಳ ಪಳೆಯುಳಿಕೆ' ಎಂದು ಸಿ.ಪಿ.ಕೆ.ಯವರು ಯಾವುದನ್ನು ಕರೆದಿದ್ದಾರೆ ? ಏಕೆ ?

27. ಮೋಡಗಳನ್ನು ಕಂಡು ರೈತನು ಹೇಗೆ ಸಂತೋಷಪಡುತ್ತಾನೆ ?

28. ಯಾವ ಗುಣವಿರುವವರು ಯಾವ ಹೆಸರಿಗೆ ಅರ್ಹರೆಂದು ಪುಲಿಗೆರೆ ಸೋಮನಾಥನು ಹೇಳಿದ್ದಾನೆ ?

29. ಗೊರೂರರನ್ನು ಮಿನಿಪೊಲೀಸ್ ನಗರದ ಪೊಲೀಸರು ಹೇಗೆ ಉಪಚರಿಸಿದರು ?

30. ಧರ್ಮಪದನು ಜ್ಞಾನತಪ್ಪಿ ಕೆಳಗುರುಳಿದ ವಿಶುವನ್ನು ಏಕೆ ಸಾಂತ್ವನಪಡಿಸಲಿಲ್ಲ ?

V. **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ :** $4 \times 3 = 12$

31. "ಓದಬೇಕಾದುದು ಬಹಳ ಜಾಸ್ತಿ ಇದೆ. ಆಯುಷ್ಯ ಮಾತ್ರ ಬಹಳ ಕಡಿಮೆ ಇದೆ."

32. "ಕಣ್‌ದಿಟ್ಟಿ ಹರಿದತ್ತ ಗ್ರಂಥಗಿರಿ ಪಂಕ್ತಿಗಳು."

33. "ದೇವಿ ನನ್ನ ಅಪರಾಧವನ್ನು ಕ್ಷಮಿಸು."

34. "ನಾಟಕ ಸ್ತ್ರೀಯಂತೆ ಬಯಲ ಡಂಭವ ತೋರಿ."

VI. **ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $4 \times 3 = 12$

35. ಕೊಡಗಿನ ಗೌರಮ್ಮನವರನ್ನು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದರೆಂದು ಏಕೆ ಹೇಳುತ್ತಾರೆ ?

36. ಕಿತ್ತೂರಿನ ರಾಣಿ ಚೆನ್ನಮ್ಮಾಳ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ಏಕೆ ಮೆಚ್ಚುವಿರಿ ?

37. ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿಯಾಗಿಡುವ ವಿಧಾನಗಳು ಬಸವಣ್ಣನವರ ವಚನದಲ್ಲಿ ಹೇಗೆ ವ್ಯಕ್ತವಾಗಿವೆ ?

38. ಡಾಂಭಿಕ ಭಕ್ತಿಯ ಆರಾಧಕರನ್ನು ಪುರಂದರದಾಸರು ಹೇಗೆ ಅಣಕಿಸಿದ್ದಾರೆ ?



https://www.karnatakaboard.com/

VII. **ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $2 \times 3 = 6$

39. ಪ್ರೊ|| ಎಸ್.ಆರ್. ರೋಹಿಡೇಕರ್

40. ಪ್ರೊ|| ಕೆ.ಎಸ್. ನಿಸಾರ್ ಅಹಮದ್

VIII. **ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

41. ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

***ಅಥವಾ***

ಬೆಳೆಯುವ ಪೈರು ಮೊಳಕೆಯಲ್ಲಿ.

IX. **ಕೆಳಗಿನ ಒಂದು ಪ್ರಶ್ನೆಗೆ *ಎಂಟು* ಅಥವಾ *ಹತ್ತು* ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $1 \times 4 = 4$

42. ಗೊರೂರರು ಮಿನಿಪೊಲೀಸ್ ನಗರದಲ್ಲಿ ತಪ್ಪಿಸಿಕೊಂಡ ಪ್ರಕರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಅಥವಾ***

ಅಮೆರಿಕಾದ ಮಿನಿಪೊಲೀಸ್ ನಗರದಲ್ಲಿ ಗೊರೂರರಿಗೆ ಎದುರಾದ ಸಮಸ್ಯೆಗಳು ಯಾವುವು ? ವಿವರಿಸಿರಿ.

X. **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** $1 \times 4 = 4$

43. ಕ್ರಾಂತಿ ಕೆಂಡದ

........................................................................

........................................................................

........................................................................

............................................................ ಬರೆಯತೇವ

***ಅಥವಾ***

ಜಾತಿ ಇಲ್ಲದ

........................................................................

........................................................................

........................................................................

........................................................................

ನಾವು ನಾಡ ಕಟ್ಟತೇವ



https://www.karnatakaboard.com/

XI. **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** $1 \times 4 = 4$

44. ಮೂಡಲಾಗಿ ಹುಯ್ಯೋ ಮುತ್ತಿನ ಸೋನೆ ಮಳೆಯೇ
ಎದ್ದು ಮೇಲವನೆ ಭೈರವ – ಬೆಟ್ಟದ ಮೇಲೆ
ಜಗ್ಗಿಸಿ ಹುಯ್ಯೋ ಮಳೆರಾಯ ॥

XII. **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $5 \times 1 = 5$

"ಗೆಳೆಯರು ಯಾರೆಂದು ತಿಳಿದರೆ ವ್ಯಕಿಯು ಎಂಥವನೆಂದು ತಿಳಿಯಬಹುದು" ಎಂಬುದು ಹಿರಿಯರ ನುಡಿ. ಗೆಳೆತನದಲ್ಲಿ ಜಾತಿ–ಭೇದಗಳಿಲ್ಲ; ಮೇಲು–ಕೀಳುಗಳಿಲ್ಲ. ಅಲ್ಲಿ ಎಲ್ಲವೂ ಸಮಾನ. ಆ ಮಧುರ ಸಂಬಂಧವು ಸೀಮಾತೀತವಾದುದು. ಬದುಕಿನಲ್ಲಿ ಉತ್ತಮ ಗೆಳೆಯನ ಸಂಪಾದನೆಯು ಒಂದು ಸುಕೃತ ಫಲ. ಅಂತಹ ಗೆಳೆತನವು ನಮ್ಮನ್ನು ನೋವು–ಸಂಕಟಗಳಿಂದ ದೂರವಿಡುತ್ತದೆ, ಒಳ್ಳೆಯ ಕೆಲಸಕ್ಕೆ ಸದಾ ಪ್ರೇರಣೆ ನೀಡುತ್ತದೆ. ಗೆಳೆತನದಲ್ಲಿ ಹೇಳಿದ ಗುಟ್ಟು ಎಂದಿಗೂ ಗುಟ್ಟಾಗಿಯೇ ಇರುತ್ತದೆ. ಸನ್ಮಿತ್ರನು ಆಪತ್ತಿನಲ್ಲಿ ಸಹಾಯ ಮಾಡುತ್ತಾನೆ. ಅವಶ್ಯಕತೆ ಇದ್ದಾಗ ವಸ್ತು, ಹಣ ಮುಂತಾದವುಗಳನ್ನು ಒದಗಿಸುತ್ತಾನೆ. ಇಂತಹ ಗೆಳೆತನದಲ್ಲಿ ಪರಸ್ಪರ ಕೊಡುಕೊಳ್ಳುವಿಕೆ ಅತ್ಯಗತ್ಯವಾಗಿರುತ್ತದೆ.

45. ಪ್ರಶ್ನೆಗಳು *:*

ಎ) ಹಿರಿಯರ ನುಡಿ ಯಾವುದು ?

ಬಿ) ಎಲ್ಲಿ ಎಲ್ಲವೂ ಸಮಾನ ?

ಸಿ) ಬದುಕಿನಲ್ಲಿ ಸುಕೃತ ಫಲವಾವುದು ?

ಡಿ) ಗೆಳೆತನವು ಯಾವುದರಿಂದ ನಮ್ಮನ್ನು ದೂರವಿಡುತ್ತದೆ ?

ಇ) ಆಪತ್ತಿನಲ್ಲಿ ಯಾರು ಸಹಾಯ ಮಾಡುತ್ತಾರೆ ?

XIII. **ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ :** $1 \times 5 = 5$

46. ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ.

***ಅಥವಾ***

ರಾಷ್ಟ್ರೀಯ ಭಾವೈಕ್ಯತೆ.



https://www.karnatakaboard.com/

XIV. **ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :** $1 \times 5 = 5$

47. ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆಯ 'ಆದರ್ಶ' ಎಂದು ಭಾವಿಸಿಕೊಂಡು, ವರ್ಗಾವಣೆ ಪತ್ರವನ್ನು ನೀಡುವಂತೆ ಕೋರಿ, ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

***ಅಥವಾ***

ನಿಮ್ಮನ್ನು ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಮಹಿಮಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲಾ ಶೈಕ್ಷಣಿಕ ಪ್ರವಾಸದ ಬಗ್ಗೆ ಮೈಸೂರಿನಲ್ಲಿರುವ ಗೆಳತಿ 'ಶ್ರಾವ್ಯಾ'ಳಿಗೆ ಒಂದು ಪತ್ರವನ್ನು ಬರೆಯಿರಿ.



https://www.karnatakaboard.com/

https://www.karnatakaboard.com/